## ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-2/ಡಿಇ/1133/2017/ಎ.ಆರ್.ಇ-10

ಡಾ:ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ: 10/12/2021.

## ವಿಚಾರಣಾ ವರದಿ

**ಉಪಸ್ಥಿತರು:** **ಜಿ. ನಂಜುಂಡಯ್ಯ,**
ಅಪರ ನಿಬಂಧಕರು ವಿಚಾರಣೆಗಳು-10,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

**ವಿಷಯ:** ಆಪಾದಿತ ಸರ್ಕಾರಿ ನೌಕರ **ಶ್ರೀ ಬಸವರಾಜು,** ಗ್ರಾಮ ಲೆಕ್ಕಿಗರು, ಅರಕಲಗೂಡು ವೃತ್ತ, ಕಸಬಾ ಹೋಬಳಿ, ಅರಕಲಗೊಡು ತಾಲ್ಲೂಕು, ಹಾಸನ ಜಿಲ್ಲೆ ರವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:** 1. ಕಂಪ್ಲೆಂಟ್/ಉಪಲೋಕ್/ಎಂವೈಎಸ್-2129/2016/ಡಿಆರ್‌ಇ-3 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 05/07/2017.
2. ಸರ್ಕಾರದ ಆದೇಶ ಸಂಖ್ಯೆ: ಕಂಇ 66 ಬಿಡಿಪಿ 2017, ಬೆಂಗಳೂರು, ದಿನಾಂಕ: 22/09/2017.
3. ನಾಮನಿರ್ದೇಶನ ಸಂಖ್ಯೆ.ಉಪಲೋಕ್-2/ಡಿಇ/1133/2017, ಬೆಂಗಳೂರು ದಿನಾಂಕ: 29/11/2017.

* * * *

ಈ ದೂರನ್ನು, ದೂರುದಾರರಾದ ಶ್ರೀ **ಎ.ಹೆಚ್. ಕನಕರಾಜು** ತಂದೆ ಲೇಟ್ ತಮ್ಮಣ್ಣ, ಅರಕಲಗೊಡು ಟೌನ್ ನಿವಾಸಿ (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ರವರು ಆಪಾದಿತ ಸರ್ಕಾರಿ ನೌಕರ ಶ್ರೀ **ಬಸವರಾಜು,** ಗ್ರಾಮ ಲೆಕ್ಕಿಗರು, ಅರಕಲಗೊಡು ವೃತ್ತ, ಕಸಬಾ ಹೋಬಳಿ, ಅರಕಲಗೊಡು ತಾಲ್ಲೂಕು, ಹಾಸನ ಜಿಲ್ಲೆ ರವರ ವಿರುದ್ಧ ದೂರನ್ನು ಸಲ್ಲಿಸಿ ದೂರುದಾರರ ತಂದೆಗೆ 3 ಜನ ಗಂಡು ಮಕ್ಕಳು ಹಾಗೂ 3 ಜನ ಹೆಣ್ಣು ಮಕ್ಕಳು ಇದ್ದು, ದೂರುದಾರರು ಪಡೆದಿರುವ ವಂಶವೃಕ್ಷದಲ್ಲಿ ಎಲ್ಲವೂ ಸರಿಯಾಗಿದ್ದು, ಕಸಬಾ ಶಿರಸ್ತೆದಾರರು ತನ್ನ ತಮ್ಮನಿಗೆ ಸುಳ್ಳು

ವಂಶವೃಕ್ಷ ಬರೆದುಕೊಟ್ಟು ಸರ್ವೆ ನಂ. 24 ಹಿಸ್ಸಾ 18 ರಲ್ಲಿ 1 ಎಕರೆ 8 ಗುಂಟೆ ಆಸ್ತಿಯನ್ನು ದೂರುದಾರರ ತಮ್ಮನಿಗೆ ಖಾತೆ ಬದಲಾಯಿಸಿಕೊಟ್ಟಿರುತ್ತಾರೆಂದು ಆಪಾದಿಸಿ ಎದುರುದಾರ/ಆಪಾದಿತ ಸರ್ಕಾರಿ ನೌಕರರ ವಿರುದ್ಧ ಕ್ರಮಕೈಗೊಳ್ಳಬೇಕೆಂದು ಕೋರಿರುತ್ತಾರೆ.

2. ತನಿಖೆ ಪೂರ್ಣಗೊಂಡ ನಂತರ, ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮ ಕಲಂ 12(3)ರಡಿಯಲ್ಲಿ ಉಲ್ಲೇಖ (1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದಾಗಿ, ಸದರಿ ವರದಿಯನ್ವಯ ಕರ್ನಾಟಕ ಸರ್ಕಾರವು ಆದೇಶ ದಿನಾಂಕ: 22/09/2017 ರಂದು, ಮಾನ್ಯ ಉಪಲೋಕಾಯುಕ್ತರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ, ಸರ್ಕಾರಿ ಆದೇಶವನ್ನು ನೀಡಿರುವ ಮೇರೆಗೆ, ಮಾನ್ಯ ಉಪಲೋಕಾಯುಕ್ತರವರು ದಿನಾಂಕ: 29/11/2017 ರಂದು ಅಪರ ನಿಬಂಧಕರು, ವಿಚಾರಣೆಗಳು–10 ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸಲು ಆದೇಶಿಸಿರುತ್ತಾರೆ.

3. ನಾಮನಿರ್ದೇಶನದ ಆದೇಶದಂತೆ, ಆ.ಸ.ನೌ ರವರ ವಿರುದ್ಧ ದೋಷಾರೋಪಣೆ (Article of Charge) ಅನ್ನು ರಚಿಸಿದ್ದು, ಸದರಿ ದೋಷಾರೋಪಣೆಯು ಅನುಬಂಧ–1 ಮತ್ತು ಅನುಬಂಧ–2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌ ರವರಿಗೆ ದಿನಾಂಕ: 12/02/2018 ರಂದು ಈ ಕೆಳಕಂಡಂತೆ ಕಳುಹಿಸಲಾಗಿರುತ್ತದೆ.

***ಅನುಬಂಧ–1***

***ದೋಷಾರೋಪಣೆ–1***

2. ಆಪಾದಿತ ಸರ್ಕಾರಿ ನೌಕರರಾದ **ಶ್ರೀ ಬಸವರಾಜು,** ಗ್ರಾಮ ಲೆಕ್ಕಿಗರು, ಅರಕಲಗೂಡು ವೃತ್ತ, ಕಸಬಾ ಹೋಬಳಿ, ಅರಕಲಗೂಡು ತಾಲ್ಲೂಕು ಹಾಸನ ಜಿಲ್ಲೆ, ಆದ ನೀವು ಈ ಕೆಳಕಂಡಂತೆ ಕರ್ತವ್ಯಲೋಪವೆಸಗಿರುತ್ತೀರಿ ;

ದಿ: 8-10-2014 ರಂದು ಸರ್ವೆ ನಂ.24 ಹಿಸ್ಸಾ 18 ರಲ್ಲಿ 1 ಎಕರೆ 8 ಗುಂಟೆ ಆಸ್ತಿಗೆ ಸಂಬಂಧಪಟ್ಟಂತೆ, ವಂಶವೃಕ್ಷ ಕೊಟ್ಟಿದ್ದು ಅದರಲ್ಲಿ ತಮ್ಮಣ್ಣ @ ಹೊನ್ನಯ್ಯ ಇವರಿಗೆ ಹೊನ್ನಮ್ಮ, ಜಯಮ್ಮ, ಎ.ಹೆಚ್. ಕನಕರಾಜು, ಶೇಷಮ್ಮ ಮತ್ತು ಎ.ಹೆಚ್.ಸೋಮಶೇಖರ ಅಂತ 6 ಜನ ಮಕ್ಕಳಿದ್ದಾರೆ. ಅರ್ಜಿದಾರರ ಹೇಳಿಕೆ ಮೇರೆಗೆ ಮತ್ತು ಗ್ರಾಮಸ್ಥರ ಸಮಕ್ಷಮದಲ್ಲಿ ದೃಢೀಕರಿಸಿದೆ ಅಂತ ಪ್ರಮಾಣ ಪತ್ರ ಕೊಟ್ಟಿರುತ್ತೀರಿ. ಈ ಮೊದಲು ದಿನಾಂಕ: 20-3-2013 ರಂದು ಸದರಿ ಹೊನ್ನಯ್ಯನಿಗೆ ಸೋಮಶೇಖರ ಒಬ್ಬನೇ ಮಗ ಅಂತ ವಂಶವೃಕ್ಷ ಕೊಟ್ಟಿರುತ್ತೀರಿ. ಯಾವುದೇ ವಂಶವೃಕ್ಷವನ್ನು ಅರ್ಜಿದಾರರ ಪ್ರಮಾಣಪತ್ರದ ಮೇಲೆ ಕೊಡುತ್ತಾರೆ. ಆದರೆ ಗ್ರಾಮಸ್ಥರ ಸಮಕ್ಷಮದಲ್ಲಿ ಸ್ಥಳೀಯ ವಿಚಾರಣೆ ಕೈಗೊಂಡು ವಂಶವೃಕ್ಷವನ್ನು ಕೊಡುವುದು ಆಪಾದಿತ ಸರ್ಕಾರಿ ನೌಕರರ ನಿಮ್ಮ ಆಧ್ಯ ಕರ್ತವ್ಯವಾಗಿದೆ. ಯಾವುದೇ ಸ್ಥಳೀಯ ವಿಚಾರಣೆಯನ್ನು ಮಾಡದೇ ವಂಶವೃಕ್ಷವನ್ನು ಕೊಟ್ಟಿರುವುದರಿಂದ, ಆಪಾದಿತ ಸರ್ಕಾರಿ ನೌಕರರಾದ ನೀವು ಕರ್ತವ್ಯಲೋಪವೆಸಗಿರುತ್ತೀರಿ.

ಆದಕಾರಣ ಆಪಾದಿತ ಸರ್ಕಾರಿ ನೌಕರರಾದ ನೀವು ಸರ್ಕಾರಿ ಸೇವಕರಾಗಿದ್ದು, ನಿಮ್ಮ ಕರ್ತವ್ಯಪಾಲನೆಯಲ್ಲಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಸ್ವಂತ ಲಾಭಕ್ಕಾಗಿ ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ಆಪಾದಿತ ಸರ್ಕಾರಿ ನೌಕರರಾದ ನೀವು ಕರ್ನಾಟಕ ಸರ್ಕಾರಿ ಸೇವಾ (ನಡತೆ) ನಿಯಮಾವಳಿ 1966ರ ನಿಯಮ (3)(1)ನೇ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಎಸಗಿದ್ದೀರಿ.

## ಅನುಬಂಧ-2

## ದೋಷಾರೋಪಣೆಯ ವಿವರ

(ಸ್ಟೇಟ್‌ಮೆಂಟ್ ಆಫ್ ಇಂಪ್ಯೂಟೇಷನ್ ಆಫ್ ಮಿಸ್‌ಕಾಂಡೆಕ್ಟ್)

3. ಈ ದೂರನ್ನು ಶ್ರೀ ಎ.ಹೆಚ್. ಕನಕರಾಜು ತಂದೆ ಲೇಟ್ ತಮ್ಮಣ್ಣ, ಅರಕಲಗೂಡು ಟೌನ್ ನಿವಾಸಿ (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು (1) ಶ್ರೀ ಬಸವರಾಜು, ಗ್ರಾಮ ಲೆಕ್ಕಿಗರು, ಅರಕಲಗೂಡು ವೃತ್ತ, ಕಸಬಾ ಹೋಬಳಿ, ಅರಕಲಗೂಡು ತಾಲ್ಲೂಕು ಹಾಸನ ಜಿಲ್ಲೆ, (2) ಶ್ರೀ

ಆರ್. ಮೋಹನ, ತಹಶೀಲ್ದಾರರು, ತಾಲ್ಲೂಕು ಕಛೇರಿ ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ, (3) ಶ್ರೀ ಶಿವರಾಜ, ಟಿ.ಎಂ. ಸರ್ವೆಯರ್, ಸರ್ವೆ ಇಲಾಖೆ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ, (4) ಶ್ರೀ ರಾಜರಾಜೇಶ್ವರಿ, ಟಿ., ಸರ್ವೆಯರ್, ಸರ್ವೆ ಇಲಾಖೆ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ ಮತ್ತು (5) ಶ್ರೀ.ನಾಗೇಗೌಡ, ಸರ್ವೆಯರ್, ಸರ್ವೆ ಇಲಾಖೆ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ ಇವರ ವಿರುದ್ಧ ಸಲ್ಲಿಸಿದ್ದಾರೆ.

4. <u>ದೂರಿನ ಸಂಕ್ಷಿಪ್ತ ವಿವರ:</u>

ದೂರುದಾರರಾದ ತಂದೆಗೆ 3 ಜನ ಗಂಡು ಮಕ್ಕಳು ಹಾಗೂ 3 ಜನ ಹೆಣ್ಣು ಮಕ್ಕಳಿದ್ದು, ತಾವು ಪಡೆದಿರುವ ವಂಶವೃಕ್ಷದಲ್ಲಿ ಎಲ್ಲವೂ ಸರಿಯಾಗಿದೆ. ಕಸ್ಬಾ ಶಿರಸ್ತೆದಾರರು ತನ್ನ ತಮ್ಮನಿಗೆ ಸುಳ್ಳು ವಂಶವೃಕ್ಷ ಬರೆದು ಕೊಟ್ಟು ಸರ್ವೆ ನಂ.24 ಹಿಸ್ಸಾ 18 ರಲ್ಲಿ 1 ಎಕರೆ 8 ಗುಂಟೆ ಆಸ್ತಿಯನ್ನು ತನ್ನ ತಮ್ಮನಿಗೆ ಖಾತೆ ಬದಲಾಯಿಸಿ ಕೊಟ್ಟಿದ್ದಾರೆ. ಆದ್ದರಿಂದ, ಆಪಾದಿತ ಸರ್ಕಾರಿ ನೌಕರರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದು ಕೋರಿರುತ್ತಾರೆ.

5. ಈ ದೂರಿನ ಮೇಲೆ ಆಪಾದಿತ ಸರ್ಕಾರಿ ನೌಕರರಿಂದ ಆಕ್ಷೇಪಣೆಗಳನ್ನು ಕೇಳಲಾಗಿದೆ.

(ಎ) ಆಪಾದಿತ ಸರ್ಕಾರಿ ನೌಕರರು ತಮ್ಮ ಆಕ್ಷೇಪಣೆಯಲ್ಲಿ ಶ್ರೀ ಸೋಮಶೇಖರ ಇವರು ಹೆಚ್.ಆರ್.ಟಿ ವಡ್ಡರಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದಾರೆ. ದೂರುದಾರರಾದ ಶ್ರೀ ಕೆ.ಹೆಚ್. ಕನಕರಾಜು ಇವರು ಅರಕಲಗೂಡು ಪಟ್ಟಣದಲ್ಲಿದ್ದಾರೆ. ಈ ಎರಡೂ ಗ್ರಾಮಗಳು ಬೇರೆ ಬೇರೆ ವೃತ್ತಕ್ಕೆ ಸೇರಿವೆ. ದೂರುದಾರರು ಅರಕಲಗೂಡು ಜೆ.ಎಂ.ಎಫ್.ಸಿ. ನ್ಯಾಯಾಲಯಲ್ಲಿ ಪಿ.ಸಿ.ಆರ್. ನಂ.234/2015 ಸಲ್ಲಿಸಿದ್ದು ಅದು ವಿಚಾರಣೆಯಲ್ಲಿದೆ. ತಾನು ಸದರಿ ಪ್ರಕರಣದ 11ನೇ ಸಾಕ್ಷಿದಾರನಾಗಿದ್ದೇನೆ. ವಂಶವೃಕ್ಷದ ವಿಷಯದಲ್ಲಿ ತನ್ನ ಯಾವುದೇ ತಪ್ಪು ಇರುವುದಿಲ್ಲ ಅಂತ ತಿಳಿಸಿದ್ದಾರೆ.

6. ಆಪಾದಿತ ಸರ್ಕಾರಿ ನೌಕರರ ಆಕ್ಷೇಪಣೆಗಳ ಮೇಲೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿದೆ.

(ಎ) ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ಅರಕಲಗೂಡು ಕಸಬಾ ಗ್ರಾಮ ಲೆಕ್ಕಾಧಿಕಾರಿಯಾಗಿರುವ ಶ್ರೀ ಬಸವರಾಜ ಇವರು ಗ್ರಾಮಕ್ಕೆ ಭೇಟಿ ನೀಡದೇ ಗ್ರಾಮಸ್ಥರನ್ನು ವಿಚಾರಿಸದೇ ಸುಳ್ಳು ವಂಶವೃಕ್ಷವನ್ನು ನೀಡಿದ್ದಾರೆ. ಸದರಿ ಶ್ರೀ ಬಸವರಾಜು ತಮ್ಮ ಸಂಬಂಧಿಕರಾಗಿದ್ದಾರೆ. ತಾವು ಎಷ್ಟು ಜನ ಅಣ್ಣ-ತಮ್ಮಂದಿರು ಅನ್ನುವುದು ಗೊತ್ತಿದೆ, ಆದರೂ ಸಹ ಸುಳ್ಳು ವಂಶವೃಕ್ಷ ನೀಡಿದ್ದಾರೆ. ಇದಕ್ಕೆ ಸಹಿ ಮಾಡಿರುವ ಸಾಕ್ಷಿದಾರರು

ತಮ್ಮ ಊರಿನವರು ಇರುವುದಿಲ್ಲ. 2014 ರಲ್ಲಿ ತನ್ನ ಹೆಂಡತಿ ಲತಾ ಇವರು ಅರ್ಜಿ ಸಲ್ಲಿಸಿದಾಗ ಇದೇ ಶ್ರೀ ಬಸವರಾಜು ಸರಿಯಾದ ವಂಶವೃಕ್ಷ ಕೊಟ್ಟಿದ್ದಾರೆ. ಆದ್ದರಿಂದ ಆಪಾದಿತ ಸರ್ಕಾರಿ ನೌಕರರು ಶ್ಯಾಮಿಲಾಗಿ ಸುಳ್ಳು ದಾಖಲೆಗಳ ಮೇಲೆ ಕ್ರಯಪತ್ರ ಮಾಡಿಕೊಟ್ಟಿದ್ದಾರೆ. ಕಾರಣ ಆಪಾದಿತ ಸರ್ಕಾರಿ ನೌಕರರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದು ಕೋರಿರುತ್ತಾರೆ.

7. ಈ ಪ್ರಕರಣದ ಸಂಪೂರ್ಣ ಕಡತವನ್ನು ಪರಿಶೀಲಿಸಿದಾಗ, ಆಪಾದಿತ ಸರ್ಕಾರಿ ನೌಕರರಾದ ಶ್ರೀ.ಬಸವರಾಜು, ಗ್ರಾಮ ಲೆಕ್ಕಾಧಿಕಾರಿಗಳು ದಿ: 8-10-2014 ರಂದು ವಂಶವೃಕ್ಷ ಕೊಟ್ಟಿದ್ದು ಅದರಲ್ಲಿ ತಮ್ಮಣ್ಣ @ ಹೊನ್ನಯ್ಯ ಇವರಿಗೆ ಹೊನ್ನಮ್ಮ, ಜಯಮ್ಮ, ಎ.ಹೆಚ್. ಕನಕರಾಜು, ಶೇಷಮ್ಮ ಮತ್ತು ಎ.ಹೆಚ್.ಸೋಮಶೇಖರ ಅಂತ 6 ಜನ ಮಕ್ಕಳಿದ್ದಾರೆ. ಅರ್ಜಿದಾರರ ಹೇಳಿಕೆ ಮೇರೆಗೆ ಮತ್ತು ಗ್ರಾಮಸ್ಥರ ಸಮಕ್ಷಮದಲ್ಲಿ ದೃಢೀಕರಿಸಿದೆ ಅಂತ ಪ್ರಮಾಣ ಪತ್ರ ಕೊಟ್ಟಿದ್ದಾರೆ. ಈ ಮೊದಲು ದಿನಾಂಕ: 20-3-2013 ರಂದು ಸದರಿ ಹೊನ್ನಯ್ಯನಿಗೆ ಸೋಮಶೇಖರ ಒಬ್ಬನೇ ಮಗ ಅಂತ ವಂಶವೃಕ್ಷ ಕೊಟ್ಟಿದ್ದಾರೆ. ಯಾವುದೇ ವಂಶವೃಕ್ಷವನ್ನು ಅರ್ಜಿದಾರರ ಪ್ರಮಾಣಪತ್ರದ ಮೇಲೆ ಕೊಡುತ್ತಾರೆ. ಆದರೆ ಗ್ರಾಮಸ್ಥರ ಸಮಕ್ಷಮದಲ್ಲಿ ಸ್ಥಳೀಯ ವಿಚಾರಣೆ ಕೈಗೊಂಡು ವಂಶವೃಕ್ಷವನ್ನು ಕೊಡುವುದು ಆಪಾದಿತ ಸರ್ಕಾರಿ ನೌಕರರ ಆಧ್ಯ ಕರ್ತವ್ಯವಾಗಿದೆ. ಯಾವುದೇ ಸ್ಥಳೀಯ ವಿಚಾರಣೆಯನ್ನು ಮಾಡದೇ ವಂಶವೃಕ್ಷವನ್ನು ಕೊಟ್ಟಿರುವುದರಿಂದ, ಆಪಾದಿತ ಸರ್ಕಾರಿ ನೌಕರರು ಕರ್ತವ್ಯಲೋಪ ಎಸಗಿದ್ದಾರೆನ್ನಲು ಸಾಕಷ್ಟು ಆಧಾರಗಳಿವೆ.

8. ಆದುದರಿಂದ, ಆಪಾದಿತ ಸರ್ಕಾರಿ ನೌಕರರು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966ರ, ನಿಯಮ 3(i)(ii) ಮತ್ತು (iii)ರಲ್ಲಿ ಹೇಳಿದಂತೆ ದುರ್ನಡತೆಯೆಸಗಿದ್ದು, ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುವುದು ಕಂಡುಬರುವುದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3)ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಆಪಾದಿತ ಸರ್ಕಾರಿ ನೌಕರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರ ಅಡಿಯಲ್ಲಿ ಆಪಾದಿತ ಸರ್ಕಾರಿ ನೌಕರರ ವಿರುದ್ಧ ಇಲಾಖಾ ವಿಚಾರಣೆಯನ್ನು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿ, ಆಪಾದಿತ ಸರ್ಕಾರಿ ನೌಕರರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು ಶಿಸ್ತು ಪ್ರಾಧಿಕಾರಿಯಾದ ಸರ್ಕಾರ ಉಲ್ಲೇಖ (1)ರ ಆದೇಶದಲ್ಲಿ ಗೌರವಾನ್ವಿತ ಉಪಲೋಕಾಯುಕ್ತರವರಿಗೆ ವಹಿಸಿದ್ದು, ಗೌರವಾನ್ವಿತ ಉಪಲೋಕಾಯುಕ್ತರವರು ಅಪರ ನಿಬಂಧಕರು ವಿಚಾರಣೆಗಳು 10 ಇವರನ್ನು ವಿಚಾರಣೆ ನಡೆಸಲು ನೇಮಕ ಮಾಡಿದ್ದಾರೆ. ಆದ್ದರಿಂದ ನಿಮ್ಮ ವಿರುದ್ಧ ಈ ಆಪಾದನೆ.

4. ಈ ಮೇಲ್ಕಂಡ ದೋಷಾರೋಪಣೆ (ಆರ್ಟಿಕಲ್ ಆಫ್ ಚಾರ್ಜ್) ಆ.ಸ.ನೌ ರವರಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌ ರವರು 26/03/2018 ರಂದು ಹಾಜರಾಗಿದ್ದು, ಅವರ ಪ್ರಥಮ ಮೌಖಿಕ ಹೇಳಿಕೆಯನ್ನು ನಿಯಮ-11(9) ಕೆ.ಸಿ.ಎಸ್. ಸಿಸಿಎ ರೂಲ್ಸ್ 1957ರ ಅಡಿಯಲ್ಲಿ ದಾಖಲಿಸಲಾಗಿರುತ್ತದೆ. ಆ.ಸ.ನೌ ರವರು ತಪ್ಪೊಪ್ಪಿಕೊಳ್ಳದೆ ಆರೋಪಗಳ ವಿಚಾರಣೆಯನ್ನು ಬಯಸಿರುತ್ತಾರೆ.

5. ಆ.ಸ.ನೌ ರವರಿಗೆ ದಾಖಲೆಗಳ ಪರಿಶೀಲನೆ ಮತ್ತು ಶೋಧನೆಗಾಗಿ ಅವಕಾಶ ಕಲ್ಪಿಸಲಾಗಿರುತ್ತದೆ.

6. ಆ.ಸ.ನೌ ರವರು ತಮ್ಮ ಲಿಖಿತ ರಕ್ಷಣಾ ಹೇಳಿಕೆಯನ್ನು ದಿನಾಂಕ 15/09/2018 ರಂದು ಸಲ್ಲಿಸಿ, ದೋಷಾರೋಪಣೆಯಲ್ಲಿ ಮಾಡಿರುವ ಆರೋಪ ಸತ್ಯಕ್ಕೆ ದೂರವಾಗಿರುತ್ತದೆಂದು ತನ್ನನ್ನು ದೋಷಾರೋಪಣೆಯಿಂದ ಮುಕ್ತಗೊಳಿಸಬೇಕೆಂದು ಕೋರಿರುತ್ತಾರೆ.

7. ಈ ವಿಚಾರಣೆಯಲ್ಲಿ, ಆ.ಸ.ನೌ ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಮಂಡನಾಧಿಕಾರಿಗಳು ತಮ್ಮ ಪರವಾಗಿ ದೂರುದಾರರಾದ **ಶ್ರೀ ಕನಕರಾಜು** ರವರನ್ನು ಪಿ.ಡಬ್ಲ್ಯೂ.1 ಎಂದು ಸಾಕ್ಷ್ಯ ನುಡಿಸಿಕೊಂಡು ನಿ.ಪಿ.-1 ರಿಂದ 8 ರವರೆಗಿನ ದಾಖಲೆಗಳನ್ನು ಶಿಸ್ತು ಪ್ರಾಧಿಕಾರದ ಪರವಾಗಿ ಗುರುತಿಸಿಕೊಂಡಿರುತ್ತಾರೆ. ತದನಂತರ, ಆ.ಸ.ನೌ ರವರ ದ್ವಿತೀಯ ಮೌಖಿಕ ಹೇಳಿಕೆಯನ್ನು ದಿನಾಂಕ 22.11.2018 ರಂದು ಪಡೆದುಕೊಳ್ಳಲಾಗಿರುತ್ತದೆ.

8. ಆ.ಸ.ನೌ ಶ್ರೀ **ಬಸವರಾಜು, ಗ್ರಾಮಲೆಕ್ಕಿಗರು** ತಮ್ಮ ಪರವಾಗಿ ತಾವೇ **ಡಿ.ಡಬ್ಲ್ಯೂ.-1** ಎಂದು ನಿ.ಡಿ. 1 **ರಿಂದ ನಿ.ಡಿ. 4** ರವರೆಗೆ ದಾಖಲೆಯನ್ನು ಗುರುತಿಸಿಕೊಂಡಿರುತ್ತಾರೆ.

9. ಉಭಯ ಪಕ್ಷದವರ ಪರವಾಗಿ ವಾದ ವಿವಾದವನ್ನು ಮತ್ತು ಆ.ಸ.ನೌ ರವರ ಪರ ಲಿಖಿತ ವಾದವನ್ನು ಪರಿಶೀಲಿಸಲಾಯಿತು.

10. ಈ ಕೆಳಕಂಡ ಅಂಶವು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತದೆ.

**ಅಂಶ–1:** ವಿಚಾರಣಾ ಪ್ರಾಧಿಕಾರವು ಆ.ಸ.ನೌ ರವರ ಮೇಲೆ ಆಪಾದಿಸಲಾದ ಆರೋಪಗಳನ್ನು ರುಜುವಾತು ಪಡಿಸಿದೆಯೇ?

**ಅಂಶ–2:** ಆದೇಶವೇನು?

11. ವಾದ ವಿವಾದದ ನಂತರ ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

12. ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿದೆ.

**ಅಂಶ 1: ಸಕರಾತ್ಮಕವಾಗಿ.**

**ಅಂಶ 2: ಅಂತಿಮ ಆದೇಶದಂತೆ**

## ಕಾರಣಗಳು:

13. ಈ ವಿಚಾರಣೆಯಲ್ಲಿ, ಆ.ಸ.ನೌ ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಮಂಡನಾಧಿಕಾರಿಗಳು ತಮ್ಮ ಪರವಾಗಿ **ದೂರುದಾರರಾದ ಶ್ರೀ ಕನಕರಾಜು** ರವರನ್ನು ಪಿ.ಡಬ್ಲ್ಯೂ.1 ಎಂದು ಸಾಕ್ಷ್ಯ ನುಡಿಸಿಕೊಂಡು ನಿ.ಪಿ.–1 ರಿಂದ 8 ರವರೆಗಿನ ದಾಖಲೆಗಳನ್ನು ಶಿಸ್ತು ಪ್ರಾಧಿಕಾರದ ಪರವಾಗಿ ಗುರುತಿಸಿಕೊಂಡಿರುತ್ತಾರೆ.

14. ದೂರುದಾರ ಪಿಡಬ್ಲ್ಯೂ–1 ಶ್ರೀ ಕನಕರಾಜು ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಆಪಾದಿತ ಸರ್ಕಾರಿ ನೌಕರರು ತನಗೆ ಪರಿಚಯವಿರುವುದಾಗಿ ಸದರಿಯವರು ಗ್ರಾಮಲೆಕ್ಕಿಗರಾಗಿ ಅರಕಲಗೊಡು

ವೃತ್ತದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆಂದು ನುಡಿದಿರುತ್ತಾರೆ. ದೂರುದಾರರು ದಿನಾಂಕ 25.08.2016 ರ ದೂರಿನ ಪ್ರಪತ್ರ–1, (ಪಿರ್ಯಾದು), ಪ್ರಪತ್ರ–2 (ಅಫಿಡವಿಟ್) ಲೋಕಾಯುಕ್ತಕ್ಕೆ ದೂರು ಸಲ್ಲಿಸಿದ್ದು ಅದನ್ನು **ನಿ.ಪಿ–1 ಮತ್ತು ನಿ.ಪಿ–2** ಎಂದು ಗುರುತಿಸಿಕೊಂಡಿರುತ್ತಾರೆ. ದೂರುದಾರರು ಮುಂದುವರೆದು ತಾನು ದೂರಿನ ಸಮಯದಲ್ಲಿದಿನಾಂಕ 21.09.2016 ರಂದು ತಾನು ಪ್ರತ್ಯುತ್ತರವನ್ನು ಸಲ್ಲಿಸಿದ್ದು ಅದು **ನಿ.ಪಿ–3** ಎಂದು ನುಡಿದಿರುತ್ತಾರೆ.

15. ಪಿಡಬ್ಲ್ಯೂ–1 ರವರು ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ತನ್ನ ತಂದೆ ಶ್ರೀ ತಮ್ಮಣ್ಣ @ ಹೊನ್ನಯ್ಯ ರವರ ಹೆಸರಿನಲ್ಲಿ ಮಾಚಗೊಂಡನಹಳ್ಳಿಯ ಸರ್ವೆ ನಂ. 24/18 ರಲ್ಲಿ 1 ಎಕರೆ 8 ಗುಂಟೆ ಜಮೀನಿರುವುದಾಗಿ ನುಡಿದಿರುತ್ತಾರೆ. ನನಗೆ ನನ್ನ ತಮ್ಮ ಶ್ರೀ ಸೋಮಶೇಖರ್ ದಿನಾಂಕ 20.03.2013 ರಂದು ಆಪಾದಿತ ಸರ್ಕಾರಿ ನೌಕರರಿಂದ **ನಿ.ಪಿ–4** ರ ವಂಶವೃಕ್ಷವನ್ನು ಪಡೆದುಕೊಂಡುದಾಗಿ ತಿಳಿದುಬಂದಿರುತ್ತದೆಂದು ನುಡಿದಿರುತ್ತಾರೆ. ನಿ.ಪಿ–4 ರ ಪ್ರಕಾರ ನನ್ನ ತಂದೆಗೆ ಶ್ರೀ ಸೋಮಶೇಖರ ಒಬ್ಬನೆ ಮಗನೆಂದು ತೋರಿಸಿರುತ್ತಾರೆ. ದೂರುದಾರರ ತಂದೆ ಶ್ರೀ ಹೊನ್ನಯ್ಯನವರು ದಿನಾಂಕ 08.03.1992 ರಲ್ಲಿ ಹಾಗೂ ನನ್ನ ತಾಯಿ ದಿನಾಂಕ 21.06.2004 ರಲ್ಲಿ ಮೃತ್ತಪಟ್ಟಿರುತ್ತಾರೆಂದು ನುಡಿದಿರುತ್ತಾರೆ.

16. ಪಿಡಬ್ಲ್ಯೂ–1 ರವರ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ನನ್ನ ತಮ್ಮ ಶ್ರೀ ಸೋಮಶೇಖರ ಮೇಲ್ಕಂಡ ಆಸ್ತಿಯನ್ನು ಮಾರಲು ಯತ್ನಿಸುತ್ತಿರುವುದಾಗಿ ತಿಳಿದು ಬಂದಿದ್ದು, ನಂತರ ದೂರುದಾರರು ದಿನಾಂಕ 10.02.2015 ರಂದು **ನಿ.ಪಿ–5** ರಂತೆ ಮನವಿ ಸಲ್ಲಿಸಿರುವುದಾಗಿ ನುಡಿದಿರುತ್ತಾರೆ. ಇದಕ್ಕೂ ಮುಂಚೆಯೇ ತನ್ನ ತಮ್ಮ ಖಾತಾ ಪಡೆದಿದ್ದು ಅದು **ನಿ.ಪಿ–5(ಎ)** ಎಂದು ಗುರುತಿಸಲಾಗಿರುತ್ತದೆ.

ಮುಂದುವರೆದು ದೂರುದಾರರು ತನ್ನ ತಮ್ಮ ಶ್ರೀ ಸೋಮಶೇಖರ್ ರವರು ದಿನಾಂಕ 04.03.2015 ರಂದು ಶ್ರೀ ಜಮಶೀದ್ ಪಾಷ್ ರವರಿಗೆ ಸದರಿ ಜಮೀನನ್ನು ನೋಂದಣಿ ಮಾಡಿಕೊಟ್ಟಿದ್ದು, ಸದರಿ ಕ್ರಯಪತ್ರವನ್ನು **ನಿ.ಪಿ–6** ಎಂದು ಗುರುತಿಸಲಾಗಿರುತ್ತದೆ.

17. ಪಿಡಬ್ಲ್ಯೂ-1 ರವರ ಮುಖ್ಯ ವಿಚಾರಣೆಯಲ್ಲಿ, ದಿನಾಂಕ 08.10.2014 ರಂರು ಆಪಾದಿತ ಸರ್ಕಾರಿ ನೌಕರರು ನೀಡಿರುವ ವಂಶವೃಕ್ಷ **ನಿ.ಪಿ-7** ಎಂದು ಗುರುತುಮಾಡಲಾಗಿದ್ದು, ಸದರಿ ವಂಶವೃಕ್ಷದಲ್ಲಿ ದೂರುದಾರರ ತಂದೆಗೆ ಒಟ್ಟು 3 ಗಂಡು ಮತ್ತು 3 ಹೆಣ್ಣು ಮಕ್ಕಳು ಇರುವುದಾಗಿ ಹಾಗೂ ದಿನಾಂಕ 05.02.2015 ರಂದು ನೀಡಿದ ಅಫಿಡೆವಿಟ್ ನ್ನು **ನಿ.ಪಿ-8** ಎಂದು ಗುರುತಿಸಲಾಗಿರುತ್ತದೆ. ಆಪಾದಿತ ಸರ್ಕಾರಿ ನೌಕರರು ತನ್ನ ತಂದೆಗೆ ತನ್ನ ತಮ್ಮ ಶ್ರೀ ಸೋಮಶೇಖರ್ ಒಬ್ಬನೆ ವಾರಸುದಾರನೆಂದು ವಂಶವೃಕ್ಷವನ್ನು ನೀಡಿದ್ದು, ಆದ್ದರಿಂದ ನಮ್ಮ ಆಸ್ತಿಯನ್ನು ತನ್ನ ತಮ್ಮ ಸಂಪೂರ್ಣವಾಗಿ ಮಾರಿರುತ್ತಾನೆಂದು, ಆದ್ದರಿಂದ ಆಪಾದಿತ ಸರ್ಕಾರಿ ನೌಕರ ಕರ್ತವ್ಯಲೋಪವೆಸಗಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ.

18. ಆ.ಸ.ನೌ ಶ್ರೀ **ಬಸವರಾಜು ಎನ್** ರವರು ತಮ್ಮ ಪರವಾಗಿ ತಾವೇ **ಡಿ.ಡಬ್ಲ್ಯೂ.-1** ಎಂದು ನಿ.ಡಿ. **1 ರಿಂದ ನಿ.ಡಿ. 4** ರವರೆಗೆ ದಾಖಲೆಯನ್ನು ಗುರುತಿಸಿಕೊಂಡು ಸಾಕ್ಷ್ಯ ನುಡಿದಿರುತ್ತಾರೆ. ದೂರುದಾರರಾದ ಕನಕರಾಜುರವರು ಅರಕಲಗೊಡು ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಸಲ್ಲಿಸಿದ ಅಸಲು ದಾವೆ ಸಂ. 8/2017 ರ ವಾದ ಪತ್ರದ ನಕಲು ಪ್ರತಿ **ನಿ.ಡಿ-1,** ದೂರುದಾರರಾದ ಕನಕರಾಜು ರವರು ಎಸಿ ಸಕಲೇಶಪುರ ರವರಮುಂದೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ಪ್ರತಿ **ನಿ.ಡಿ-2,** ದೂರುದಾರರು ಅರಕಲಗೊಡು ಪಿಸಿಆರ್ ನಂ. 234/2015 ರಂದು ಸಲ್ಲಿಸಿದ ಪ್ರತಿ **ನಿ.ಪಿ-3** ಹಾಗೂ ಪೋಲೀಸ್ ನವರು ಪಿಸಿಆರ್‌ಗೆ ಸಂಬಂಧಪಟ್ಟಂತೆ ಸಲ್ಲಿಸಿದ ಎಫ್.ಐ.ಆರ್.ನ ಸಿಸಿ ನಂ. 397/2016 ರ ಪ್ರತಿ **ನಿ.ಡಿ-4** ಎಂದು ಗುರುತಿಸಿಕೊಂಡಿರುತ್ತಾರೆ. ಆಪಾದಿತ ಸರ್ಕಾರಿ ನೌಕರರು ದೂರುದಾರರ ತಮ್ಮ ಶ್ರೀ ಎ.ಎಚ್. ಸೋಮಶೇಖರ್ ರವರು ಒಬ್ಬನೆ ಮಗ ಎಂದು ವಂಶ ವೃಕ್ಷವನ್ನು ನಿ.ಪಿ-4 ರಂತೆ ಹಾಗೂ ಇನ್ನೂ ಆನೇಕ ದಾಖಲೆಗಳನ್ನು ಸೃಷ್ಟಿ ಮಾಡಿ ಹಾಗೂ ಅಧಿಕಾರಿಗಳ ಬೇರೆಯವರ ಸಹಿಗಳನ್ನು ನಕಲು ಮಾಡಿ ಸರ್ವೆ ನಂ. 24/18 ರಲ್ಲಿ 1 ಎಕರೆ 8 ಗುಂಟೆ ಜಮೀನನ್ನು ಮೋಸದಿಂದ ಜಮ್‌ಷಿದ್ ಪಾಷರವರಿಗೆ ಮಾರಾಟ ಮಾಡಿರುವುದರ ವಿರುದ್ಧ ದೂರುದಾರರು ಖಾಸಗಿ ದೂರನ್ನು ನೀಡಿದ್ದು, ತನ್ನ ವಿರುದ್ಧ ಮಾಡಿರುವ ಆರೋಪ ಸತ್ಯಕ್ಕೆ ದೂರವಾಗಿರುತ್ತದೆಂದು ಸಾಕ್ಷ್ಯ ನುಡಿದಿರುತ್ತಾರೆ.

19. ಆಪಾದಿತ ಸರ್ಕಾರಿ ನೌಕರರು ದಿನಾಂಕ 30/09/2021, 29.10.2021, 15.11.2021 ಹಾಗೂ 07/12/2021 ಈ ವಿಚಾರಣಾ ಪ್ರಾಧಿಕಾರದ ಮುಂದೆ ಗೈರುಹಾಜರಾಗಿದ್ದು, ಆತನ ಪಾಟೀ ಸವಾಲನ್ನು ಇಲ್ಲ ಎಂದು ತೆಗೆದುಕೊಂಡಿರುತ್ತದೆ.

20. ಪ್ರಾ.ಸಾ–1 ರವರ ಸಾಕ್ಷ್ಯ ನಿ.ಪಿ–1 ರಿಂದ 8 ದಾಖಲಾತಿಗಳನ್ನು ಹಾಗೂ ನಿ.ಡಿ–1 ರಿಂದ 4 ದಾಖಲಾತಿಗಳನ್ನು ಹಾಗೂ ಕಡತದಲ್ಲಿರುವ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿರುತ್ತೇನೆ. ಸದರಿ ದೂರನ್ನು ಶ್ರೀ ಎ.ಹೆಚ್. ಕನಕರಾಜು, ಅರಕಲಗೊಡು ಟೌನ್ ರವರು ಲೋಕಾಯುಕ್ತಕ್ಕೆ ನಿ.ಪಿ–1 ಮತ್ತು 2 ರಂತೆ ದೂರು ಸಲ್ಲಿಸಿ ತನ್ನ ತಮ್ಮ ಸೋಮಶೇಖರ್ ರವರಿಗೆ ಸುಳ್ಳು ವಂಶವೃಕ್ಷ ಬರೆದು ಕೊಟ್ಟು ಸರ್ವೆ ನಂ. 24 ರಲ್ಲಿ 1 ಎಕರೆ 8 ಗುಂಟೆ ಆಸ್ತಿಯನ್ನು ತನ್ನ ತಮ್ಮನಿಗೆ ಖಾತೆ ಬದಲಾಯಿಸಿ ಕೊಟ್ಟಿದ್ದು ಸದರಿಯವರ ವಿರುದ್ಧ ಕಾನೂನು ಕ್ರಮಕೈಗೊಳ್ಳಲು ಕೋರಿರುವುದು ಕಂಡು ಬಂದಿರುತ್ತದೆ. ದೂರುದಾರರ ತಂದೆ ತಾಯಿ ಮೃತರಾಗಿದ್ದು ಸದರಿಯವರಿಗೆ ಒಟ್ಟು 3 ಗಂಡು ಮತ್ತು 3 ಹೆಣ್ಣು ಮಕ್ಕಳಿದ್ದು ಆದರೆ ಆಪಾದಿತ ಸರ್ಕಾರಿ ನೌಕರ ಶ್ರೀ ಬಸವರಾಜು, ಗ್ರಾಮಲೆಕ್ಕಿಗರು, ಅರಕಲಗೊಡು ವೃತ್ತ ರವರು **ನಿ.ಪಿ–4 ರಂತೆ ದೂರುದಾರರ ತಮ್ಮ ಶ್ರೀ ಸೋಮಶೇಖರ್ ಒಬ್ಬರೆ ವಾರಸ್ಸುದಾರರೆಂದು** ಅವರಿಗೆ ಸುಳ್ಳು ವಂಶವೃಕ್ಷ ನೀಡಿರುವುದು ಕಂಡು ಬರುತ್ತದೆ. ನಂತರ ಶ್ರೀ ಸೋಮಶೇಖರ್ ರವರ ಹೆಸರಿಗೆ ಖಾತೆಯನ್ನು ನಿ.ಪಿ–5(ಎ) ರಂತೆ ಮಾಡಿಕೊಟ್ಟಿರುವುದು ಕಂಡುಬರುತ್ತದೆ. ನಂತರ ಶ್ರೀ ಸೋಮಶೇಖರ್ ರವರು ದಿನಾಂಕ 04.03.2015 ರಂದು ಶ್ರೀ ಜಮಶಿದ್ ಪಾಷ ರವರಿಗೆ ರೂ 1,00,000/– ಗಳಿಗೆ ಶುದ್ಧ ಕ್ರಯಪತ್ರ ನಿ.ಪಿ–6 ಮಾರಾಟ ಮಾಡಿರುವುದು ಕಂಡು ಬರುತ್ತದೆ. ನಿ.ಪಿ–7 ಆಪಾದಿತ ಸರ್ಕಾರಿ ನೌಕರರು ದೂರುದಾರರಿಗೆ ನಿ.ಪಿ–7 ರಂತೆ ವಂಶವೃಕ್ಷ ನೀಡಿದ್ದು ಪರಿಶೀಲಿಸಲಾಗಿ ದೂರುದಾರರ ತಂದೆ ತಾಯಿಗೆ ಒಟ್ಟು 3 ಜನ ಗಂಡು ಮತ್ತು 3 ಹೆಣ್ಣು ಮಕ್ಕಳಿರುವುದು ಕಂಡು ಬರುತ್ತದೆ. ಆದರೆ, ಆಪಾದಿತ ಸರ್ಕಾರಿ ನೌಕರರು ದೂರುದಾರರ ತಮ್ಮ ಶ್ರೀ ಸೋಮಶೇಖರ್ ರವರಿಗೆ ಉದ್ದೇಶಪೂರ್ವಕವಾಗಿ ಲಾಭದ ದೃಷ್ಟಿಯಿಂದ ನಿ.ಪಿ–4 ರ ಪ್ರಕಾರ ದೂರುದಾರರ ತಂದೆ ತಾಯಿಗೆ ಶ್ರೀ ಸೋಮಶೇಖರ್ ಒಬ್ಬರೆ ಮಗನೆಂದು ಸುಳ್ಳು ವಂಶವೃಕ್ಷ ನೀಡಿ ಸದರಿ ಜಮೀನಿಗೆ ಒಬ್ಬನೆ ವಾರಸ್ಸುದಾರನೆಂದು ವಂಶವೃಕ್ಷ ನೀಡಿ ಮಾಚಗೋಡನಹಳ್ಳಿ ಗ್ರಾಮದಲ್ಲಿರುವ 1 ಎಕರೆ 8 ಗುಂಟೆಗೆ ಒಬ್ಬನೇ ಹಕ್ಕುದಾರನಾಗಿ ಸದರಿ ಜಮೀನು ಮಾರಲು ಅನುವು ಮಾಡಿಕೊಟ್ಟು ಕರ್ತವ್ಯಲೋಪವೆಸಗಿರುವುದು ವಿಚಾರಣೆಯಿಂದ ರುಜುವಾತಾಗಿರುತ್ತದೆ.

**ಅಂಶ-2: ಈ ಮೇಲ್ಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ವಿಚಾರಣಾ ವರದಿ ಸಲ್ಲಿಸಲಾಗಿದೆ.**

**: ವಿಚಾರಣಾ ವರದಿ :**

ಶಿಸ್ತು ಪ್ರಾಧಿಕಾರದವು ಆ.ಸ.ನೌ ಆಪಾದಿತ ಸರ್ಕಾರಿ ನೌಕರ **ಶ್ರೀ ಬಸವರಾಜು, ಗ್ರಾಮಲೆಕ್ಕಿಗರು, ಅರಕಲಗೊಡು ವೃತ್ತ, ಕಸಬಾ ಹೋಬಳಿ, ಅರಕಲಗೊಡು ತಾಲ್ಲೂಕು, ಹಾಸನ ಜಿಲ್ಲೆ** ರವರ ವಿರುದ್ಧದ ಆಪಾದನೆ ರುಜುವಾತು ಪಡಿಸುವಲ್ಲಿ **ಸಫಲರಾಗಿರುತ್ತಾರೆ.**

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ-2 ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

**10 ನೇ ಡಿಸಂಬರ್ 2021**

(ಜಿ. ನಂಜುಂಡಯ್ಯ)
ಅಪರ ನಿಬಂಧಕರು ವಿಚಾರಣೆಗಳು-10,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

**DOR of DGO is 30.04.2032.**

| | |
|---|---|
| **LIST OF WITNESS EXAMINED ON BEHALF OF DISCIPLINARY AUTHORITY :** | |
| PW-1 : Sri. Kanakaraju (complainant) (original) | |
| **LIST OF WITNESS EXAMINED ON BEHALF OF DEFENSE :** | |
| DW-1 : Sri. Basavaraju (DGO)-(original) | |
| **LIST OF EXHIBITS MARKED ON BEHALF OF DISCIPLINARY AUTHORITY:** | |
| Ex.P.1 : | Form No. I (complaint) dt. 25/08/2016 (original) |
| Ex.P.2 : | Form No. II (Affidavit) dt. 25/08/2016 (original) |
| Ex.P.3 : | Rejoinder of complainant dated 21.09.2016 (original) |
| Ex.P.4 : | Genealogical Tree (xerox) |
| Ex.P.5 : | Representation of complainant to Tahasildar dated 10.02.2015 (Xerox) |
| Ex.P.5(a) | Khatha dated 30/11/2013 (Xerox) |
| Ex.P.6 : | Registered sale deed dated 04/03/2015 (Xerox) |
| Ex.P.7 : | Genealogical Tree (Original) |
| Ex.P.8 : | Affidavit dated 05/02/2015 (Xerox) |
| **LIST OF EXHIBITS MARKED ON BEHALF OF DEFENSE:** | |
| Ex.D-1 : | Complainant filed O.s. No. 8/2017 in Arkalgud Senior Civil Judge Court argument copy (Xerox) |
| Ex.D-2 : | Complainant filed appeal before Assistant Commissioner, Sakaleshpura appeal copy (Xerox) |
| Ex.D-3 : | Complainant filed PCR No. 234/2015 in |

| | |
|---|---|
| | Arkalgud JMFC copy (Xerox) |
| Ex.D-4 : | FIR CC No. 397/2016 copy pertains to PCR (Xerox) |

**10th December 2021.**

**(G. NANJUNDAIAH)**
Additional Registrar (Enquiries)-10
Karnataka Lokayukta,
Bengaluru.

**GOVERNMENT OF KARNATAKA**

**KARNATAKA LOKAYUKTA**

NO:UPLOK-2/DE/1133/2017/ARE-10

Multi Storied Building,
Dr. B.R. Ambedkar Veedhi,
Bengaluru-560 001,
Date: **11/07/2022**

## MODIFIED RECOMMENDATION

Sub:- Departmental inquiry against;
Sri Basavaraj, Village Accountant, Arakalgud Circle, Kasaba Hobli, Arakalgud Taluk, Hassan District - Reg.

Ref:- 1) Govt. Order No.RD 66 BDP 2017 , Bengaluru dated 22/9/2017

2) Inquiry Report dated 10/12/2021 of Additional Registrar of Enquiries-10, Karnataka Lokayukta, Bengaluru.

3) Recommendation dated 15/12/2021 communicated to Government vide letter dated 18/8/2021 of the Registrar, Karnataka Lokayukta, Bengaluru.

4) Govt. letter No. RD 66 BDP 2017, Dated 17/3/2022 of the Principal Secretary to Government, Revenue Department, Bengaluru

----

In the above referred departmental inquiry against DGO Sri Basavaraj, Village Accountant, Arakalgud Circle, Kasaba Hobli, Arakalgud Taluk, Hassan District, on the basis of the inquiry report of the inquiry officer, holding that the charge against the DGO as proved, a recommendation dated 15/12/2021 was made to the Government for imposing penalty of withholding four annual increments payable to DGO with cumulative effect.

2. The Government in its letter dated 17/3/2022 addressed to this institution has stated that the DGO Sri Basavaraj has died on 20/9/2021 and therefore sought for opinion of the Upalokayukta to record abatement of disciplinary proceedings against DGO.

3. From the copy of the death certificate enclosed to the above Government letter, it is disclosed that the DGO Sri Basavaraj has died on 20/9/2021 even prior to the submission of inquiry report by the inquiry officer and the recommendation made by this Authority thereon.

4. Therefore, in view of the letter of the Government, the earlier recommendation dated 15/12/2021 is modified and it is hereby recommended to the Government for recording abatement of disciplinary proceedings against DGO Sri Basavaraj, the then Village Accountant, Arakalgud Circle, Kasaba Hobli, Arakalgud Taluk, Hassan District.

Action taken in the matter shall be intimated to this Authority.

12/7/22

**(JUSTICE K.N. PHANEENDRA)**
Upalokayukta
State of Karnataka,
Bengaluru